**All India Radio: Bangalore**
**National Bulletin In Kannada**
**12.09.2026  7.35 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**೧. ಬ್ರಿಕ್ಸ್ ಶೃಂಗಸಭೆಯಲ್ಲಿ ನವದೆಹಲಿ ಘೋಷಣೆ-೨೦೨೬ ಅಳವಡಿಕೆ; ಜಾಗತಿಕ ಸಂಘರ್ಷ, ಭಯೋತ್ಪಾದನೆ ವಿರುದ್ಧ ಬ್ರಿಕ್ಸ್ ತೀವ್ರ ಕಳವಳ**

**೨. ಕ್ರೀಡಾ ತಂತ್ರಜ್ಞಾನ ಹಾಗೂ ಉತ್ಪಾದನಾ ಉತ್ತೇಜನಕ್ಕೆ ಬ್ರಿಕ್ಸ್ ಸಮ್ಮತಿ: ಭಾರತದ ಪ್ರಸ್ತಾಪಗಳಿಗೆ ಒಪ್ಪಿಗೆ**

**೩. ಬ್ರಿಕ್ಸ್ ಶೃಂಗಸಭೆ ಹಿನ್ನೆಲೆ ಜಾಗತಿಕ ನಾಯಕರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದ್ವಿಪಕ್ಷೀಯ ಮಾತುಕತೆ**

**೪. ರಾಯ್‌ಗಢದಲ್ಲಿ ವಿಶ್ವದಲ್ಲೇ ಸುದೀರ್ಘ 'ಸ್ಟೀಲ್ ಸ್ಲಾಗ್' ರಸ್ತೆ ನಿರ್ಮಾಣ; ಗಿನ್ನೆಸ್ ವಿಶ್ವ ದಾಖಲೆ ಬರೆದ ಭಾರತ**

**೫. ಮಹಿಳಾ ಏಷ್ಯಾ ಕಪ್ ಹಾಕಿ; ಪ್ರಶಸ್ತಿಗಾಗಿ ಭಾರತ-ಚೀನಾ ಹಣಾಹಣಿ**

**<>><><*><><<>**

ನವದೆಹಲಿಯಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯ ಮೊದಲ ದಿನವಾದ ಇಂದು ಐತಿಹಾಸಿಕ 'ನವದೆಹಲಿ ಘೋಷಣೆ ೨೦೨೬' ಅನ್ನು ಅಳವಡಿಸಿಕೊಳ್ಳಲಾಗಿದೆ. ಇದರ ಮೂಲಕ ಬ್ರಿಕ್ಸ್ ರಾಷ್ಟ್ರಗಳು ಜಾಗತಿಕ ಧ್ರುವೀಕರಣ, ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ವೆಚ್ಚದ ಏರಿಕೆ ಹಾಗೂ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಸಂಘರ್ಷಗಳ ಕುರಿತು ತೀವ್ರ ಆತಂಕ ವ್ಯಕ್ತಪಡಿಸಿವೆ. ಸುಸ್ಥಿರ ಅಭಿವೃದ್ಧಿ, ಹಸಿವು ಮತ್ತು ಬಡತನ ನಿರ್ಮೂಲನೆ ಹಾಗೂ ಹವಾಮಾನ ವೈಪರೀತ್ಯದ ಸವಾಲುಗಳನ್ನು ಎದುರಿಸಲು ಪ್ರತಿಯೊಂದು ದೇಶದ ದೃಷ್ಟಿಕೋನಗಳನ್ನು ಗೌರವಿಸುವ ಬಹುಪಕ್ಷೀಯ ವಿಧಾನವನ್ನು ಬ್ರಿಕ್ಸ್ ನಾಯಕರು ಬಲವಾಗಿ ಬೆಂಬಲಿಸಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಕುರಿತು ಕಳವಳ ವ್ಯಕ್ತಪಡಿಸಿದ ಬ್ರಿಕ್ಸ್ ಒಕ್ಕೂಟ, ಯುದ್ಧ ನಿರತ ದೇಶಗಳು ಗರಿಷ್ಠ ಸಂಯಮ ಕಾಯ್ದುಕೊಳ್ಳಬೇಕು ಮತ್ತು ವಿಶ್ವಸಂಸ್ಥೆಯ ನಿಯಮಾವಳಿಗೆ ಬದ್ಧವಾಗಿ ನಾಗರಿಕರು ಹಾಗೂ ನಾಗರಿಕ ಮೂಲಸೌಕರ್ಯಗಳ ರಕ್ಷಣೆ ಮಾಡಬೇಕು ಎಂದು ಒತ್ತಾಯಿಸಿದೆ.  ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಸಂಪೂರ್ಣ ಭದ್ರತಾ ವ್ಯಾಪ್ತಿಯಲ್ಲಿರುವ ಶಾಂತಿಯುತ ಪರಮಾಣು ಸೌಲಭ್ಯಗಳು ಮತ್ತು ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ವಿರೋಧಿಸಿದ ನಾಯಕರು, ಅಣು ಸುರಕ್ಷತೆಯನ್ನು ಸದಾ ಕಾಯ್ದುಕೊಳ್ಳಬೇಕು ಎಂದಿದ್ದಾರೆ.  ಗಾಜಾ ಪಟ್ಟಿಯಲ್ಲಿ ತಕ್ಷಣದ ಕದನ ವಿರಾಮ ಜಾರಿ, ತಡೆರಹಿತ ಮಾನವೀಯ ನೆರವು ಪೂರೈಕೆ ಹಾಗೂ ಪ್ಯಾಲೆಸ್ಟೈನ್ ಜನತೆಯ ನ್ಯಾಯಸಮ್ಮತ ಹಕ್ಕುಗಳ ಈಡೇರಿಕೆಯ ಮೂಲಕವೇ ಇಸ್ರೇಲ್-ಪ್ಯಾಲೆಸ್ಟೈನ್ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಸಾಧ್ಯ ಎಂದು ಪುನರುಚ್ಚರಿಸಲಾಗಿದೆ. ಇದೇ ವೇಳೆ, ಯಾವುದೇ ರೂಪದ ಭಯೋತ್ಪಾದನೆಯನ್ನು ತೀಕ್ಷ್ಣವಾಗಿ ಖಂಡಿಸಿದ ಬ್ರಿಕ್ಸ್ ನಾಯಕರು, ಕಳೆದ ವರ್ಷ ಏಪ್ರಿಲ್ ೨೨ ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಖಂಡಿಸಿದರು. ಗಡಿಯಾಚೆಗಿನ ಭಯೋತ್ಪಾದಕರ ಸಂಚಾರ, ಉಗ್ರವಾದಕ್ಕೆ ಹಣಕಾಸು ನೆರವು ಹಾಗೂ ಸುರಕ್ಷಿತ ಅಡಗುತಾಣಗಳನ್ನು ಸಂಪೂರ್ಣವಾಗಿ ಮಟ್ಟಹಾಕಲು ಒಕ್ಕೂಟದ ದೇಶಗಳು ತಮ್ಮ ಬದ್ಧತೆಯನ್ನು ಪ್ರಕಟಿಸಿವೆ. ಕ್ರೀಡೆಯನ್ನು ಸಾಮಾಜಿಕ ಅಭಿವೃದ್ಧಿಯ ಮಾಧ್ಯಮ ಎಂದು ಗುರುತಿಸಿರುವ ಬ್ರಿಕ್ಸ್ 'ನವದೆಹಲಿ ಘೋಷಣೆ', ಭಾರತ ಪ್ರಸ್ತಾಪಿಸಿದ್ದ 'ಕ್ರೀಡಾ ತಂತ್ರಜ್ಞಾನ ಕಾರ್ಯಪಡೆ' ರಚನೆ ಹಾಗೂ 'ಕ್ರೀಡಾ ಸಾಮಗ್ರಿಗಳ ಉತ್ಪಾದನಾ ಸಮಾವೇಶ' ಆಯೋಜನೆಗೆ ಪೂರ್ಣ ಸಮ್ಮತಿ ಸೂಚಿಸಿದೆ. ಕ್ರೀಡಾಪಟುಗಳ ಪ್ರದರ್ಶನ ಮೌಲ್ಯ, ಪಾರದರ್ಶಕತೆ ಹಾಗೂ ಆಡಳಿತ ಸುಧಾರಣೆಯಲ್ಲಿ ತಂತ್ರಜ್ಞಾನದ ಪಾತ್ರ ಪ್ರಮುಖ ಎಂದು ಒಕ್ಕೂಟ ಪ್ರತಿಪಾದಿಸಿದೆ. ಕಳೆದ ತಿಂಗಳು ವಿಶಾಖಪಟ್ಟಣಂನಲ್ಲಿ ನಡೆದ ಬ್ರಿಕ್ಸ್ ಕ್ರೀಡಾ ಸಚಿವರ ಸಭೆಯಲ್ಲಿ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಮಂಡಿಸಿದ್ದ ಪ್ರಮುಖ ಉಪಕ್ರಮಗಳಿಗೆ ಈ ಮೂಲಕ ಜಾಗತಿಕ ಮಾನ್ಯತೆ ದೊರೆತಂತಾಗಿದೆ.

**<>><><*><><<>**

ಇದಕ್ಕೂ ಮುನ್ನ ಇಂದು ಬೆಳಗ್ಗೆ ನವದೆಹಲಿಯ ಭಾರತ ಮಂಟಪದಲ್ಲಿ ೧೮ನೇ ಬ್ರಿಕ್ಸ್ ಶೃಂಗಸಭೆಗೆ ಚಾಲನೆ ದೊರೆಯಿತು.  ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಬ್ರಿಕ್ಸ್ ಒಕ್ಕೂಟದ ಅಧ್ಯಕ್ಷತೆ ಪ್ರತಿವರ್ಷ

ಬದಲಾಗುತ್ತಿದ್ದರೂ ಸಂಸ್ಥೆಯ ಕಾರ್ಯಸಾಧನೆ ಮತ್ತು ವೇಗವನ್ನು ನಿರಂತರವಾಗಿ ಕಾಯ್ದುಕೊಳ್ಳಲು 'ಬ್ರಿಕ್ಸ್ ನಿರಂತರತೆ ಮತ್ತು ಅನುಷ್ಠಾನ ವ್ಯವಸ್ಥೆ' ಅನ್ನು ಪ್ರತಿಪಾದಿಸಿದರು. ಈ ನೂತನ ಚೌಕಟ್ಟು ಒಕ್ಕೂಟದ ಎಲ್ಲಾ ನಿರ್ಧಾರ ಮತ್ತು ಉಪಕ್ರಮಗಳ ನಿರಂತರ ಅನುಸರಣೆಗೆ ನೆರವಾಗಲಿದೆ. ಮುಂಬರುವ ೨೦ ವರ್ಷಗಳಿಗಾಗಿ ಬ್ರಿಕ್ಸ್ ರಾಷ್ಟ್ರಗಳು ಮಹತ್ವಕಾಂಕ್ಷಿ ಕಾರ್ಯಸೂಚಿಯೊಂದಿಗೆ ಶ್ರಮಿಸಬೇಕಿದ್ದು, ಈ ಬದಲಾವಣೆ ಒಕ್ಕೂಟದ ಆಂತರಿಕ ಕಾರ್ಯಾಚರಣಾ ವ್ಯವಸ್ಥೆಯಿಂದ ಆರಂಭವಾಗಬೇಕು ಎಂದರು. ಇನ್ನು ಜಾಗತಿಕ ವ್ಯಾಪಾರಕ್ಕೆ ಅಪಾರ ಕೊಡುಗೆ ನೀಡುವ ನಾವಿಕರು ಎದುರಿಸುವ ತುರ್ತು ಸಂದರ್ಭಗಳಲ್ಲಿ ನೆರವಾಗಲು ಸಂಬಂಧಪಟ್ಟ ರಾಷ್ಟ್ರಗಳ ಕಡಲ ಪ್ರಾಧಿಕಾರಗಳು ಹಾಗೂ ರಾಜತಾಂತ್ರಿಕ ನಿಯೋಗಗಳನ್ನು ಬೆಸೆಯುವ 'ನಾವಿಕರ ತುರ್ತು ಬೆಂಬಲ ಜಾಲ' ಅನ್ನು ಸ್ಥಾಪಿಸಲು ಪ್ರಧಾನಿ ಕರೆ ನೀಡಿದರು. ಬ್ರಿಕ್ಸ್ ಯಾರ ವಿರುದ್ಧವೂ ಕಾರ್ಯ ನಿರ್ವಹಿಸದೆ, ಎಲ್ಲರನ್ನೊಳಗೊಳ್ಳುವ ಮನೋಭಾವದೊಂದಿಗೆ ಮುನ್ನಡೆಯುತ್ತಿದೆ ಎಂದರು.ದು ತಿಳಿಸಿದ್ದ೨೬ ಹಜ

**<>><><*><><<>**

೧೮ನೇ ಬ್ರಿಕ್ಸ್ ಶೃಂಗಸಭೆಯ ನಡುವೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಜಾಗತಿಕ ನಾಯಕರೊಂದಿಗೆ ಸರಣಿ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಿದರು. ಈ ವೇಳೆ ಪ್ರಧಾನಿಯವರು ಇಥಿಯೋಪಿಯಾ ಪ್ರಧಾನಿ ಡಾ.ಅಬಿಯ್ ಅಹಮದ್ ಅಲಿ, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಹಾಗೂ ವಿಯೆಟ್ನಾಂ ಪ್ರಧಾನಿ ಲೇ ಮಿನ್ ಹಂಗ್ ಅವರೊಂದಿಗೆ ಪ್ರತ್ಯೇಕ ಭೇಟಿ ನಡೆಸಿ ಸಮಾಲೋಚಿಸಿದರು. ಉಭಯ ದೇಶಗಳ ನಾಯಕರು ವಾಣಿಜ್ಯ, ರಕ್ಷಣೆ ಮತ್ತು ಭದ್ರತೆ, ಸಾಂಸ್ಕೃತಿಕ ಸಂಬಂಧಗಳು ಹಾಗೂ ಸಾರ್ವಜನಿಕ ಸಹಭಾಗಿತ್ವದ ವಿಸ್ತರಣೆಯ ಕುರಿತು ಸಮಗ್ರ ಪರಿಶೀಲನೆ ನಡೆಸಿದ್ದಲ್ಲದೆ, ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಕುರಿತು ದೃಷ್ಟಿಕೋನಗಳನ್ನು ಹಂಚಿಕೊಂಡರು. ಇದೇ ವೇಳೆ, ಪ್ರಧಾನಿ ಅವರು, ಅಬುಧಾಬಿಯ ಯುವರಾಜ ಶೇಖ್ ಖಾಲಿದ್ ಬಿನ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಅವರೊಂದಿಗೂ ಉನ್ನತ ಮಟ್ಟದ ಮಾತುಕತೆ ನಡೆಸಿದರು. ಈ ಸಭೆಯಲ್ಲಿ ಭಾರತ ಮತ್ತು ಯುಎಇ ನಡುವಿನ 'ಸಮಗ್ರ ಕಾರ್ಯತಂತ್ರ ಪಾಲುದಾರಿಕೆ'ಯ ಮಹತ್ವವನ್ನು ಉಭಯ ನಾಯಕರು ಪುನರುಚ್ಚರಿಸಿದ್ದು, ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಎತ್ತರಕ್ಕೆ ಒಯ್ಯುವ ಕುರಿತು ಆಶಯ ವ್ಯಕ್ತಪಡಿಸಿದರು.

**<>><><*><><<>**

ನವದೆಹಲಿಯಲ್ಲಿ ನಡೆಯುತ್ತಿರುವ ೧೮ನೇ ಬ್ರಿಕ್ಸ್ ಶೃಂಗಸಭೆಯ ಮೊದಲ ದಿನದ ಅಧಿವೇಶನ ಮುಕ್ತಾಯಗೊಂಡ ಬಳಿಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಬ್ರಿಕ್ಸ್ ರಾಷ್ಟ್ರಗಳ ನಾಯಕರು ಭಾರತ್ ಮಂಟಪದ ಹೊರಭಾಗದಲ್ಲಿರುವ ಆವರಣದಲ್ಲಿ ಸಸಿಗಳನ್ನು ನೆಟ್ಟರು. ನಂತರ ಅವರು ಭಾರತ್ ಇನ್ನೋವೇಟ್ಸ್ ಪ್ರದರ್ಶನಕ್ಕೂ ಭೇಟಿ ನೀಡಿದರು.

**<>><><*><><<>**

ಛತ್ತೀಸ್‌ಗಢದ ರಾಯ್‌ಗಢದಲ್ಲಿ ನಿರ್ಮಿಸಲಾದ ೧.೮೫ ಕಿಲೋಮೀಟರ್ ಉದ್ದದ ವಿಶ್ವದ ಅತ್ಯಂತ ಸುದೀರ್ಘ 'ಸ್ಟೀಲ್ ಸ್ಲ್ಯಾಗ್' ರಸ್ತೆಯು ಪ್ರಸಿದ್ಧ ಗಿನ್ನಿಸ್ ವಿಶ್ವ ದಾಖಲೆಯ ಗೌರವಕ್ಕೆ ಪಾತ್ರವಾಗಿದೆ. ಉಕ್ಕು ಉತ್ಪಾದನಾ ಪ್ರಕ್ರಿಯೆಯಲ್ಲಿ ಹೊರಬರುವ ಉಪಉತ್ಪನ್ನವಾದ 'ಸ್ಟೀಲ್ ಸ್ಲ್ಯಾಗ್' ಅನ್ನು ಶುದ್ಧೀಕರಿಸಿ, ರಸ್ತೆ ನಿರ್ಮಾಣದ ಜಲ್ಲಿಕಲ್ಲುಗಳಿಗೆ ಪರ್ಯಾಯವಾಗಿ ಬಳಸುವ ಅತ್ಯಾಧುನಿಕ ಸ್ವದೇಶಿ ತಂತ್ರಜ್ಞಾನಕ್ಕೆ ಈ ಯೋಜನೆಯು ಬೃಹತ್ ಮೈಲಿಗಲ್ಲಾಗಿದೆ. ನವದೆಹಲಿಯಲ್ಲಿಂದು ನಡೆದ ಗಿನ್ನೆಸ್ ವಿಶ್ವ ದಾಖಲೆ ಪ್ರಮಾಣಪತ್ರ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್, ಸಿಎಸ್ಐಆರ್-ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ ಖಾಸಗಿ ವಲಯದ ಸಹಭಾಗಿತ್ವದೊಂದಿಗೆ ಈ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದರು. ಈ ಕ್ರಾಂತಿಕಾರಿ ತಂತ್ರಜ್ಞಾನ, ರಸ್ತೆ ನಿರ್ಮಾಣ ವೆಚ್ಚವನ್ನು ಶೇಕಡಾ ೪೦ ರಷ್ಟು ತಗ್ಗಿಸುವುದಲ್ಲದೆ, ಸಾಂಪ್ರದಾಯಿಕ ರಸ್ತೆಗಳಿಗಿಂತ ನಾಲ್ಕು ಪಟ್ಟು ಹೆಚ್ಚಿನ ಬಾಳಿಕೆ ಹಾಗೂ ಶಕ್ತಿಯನ್ನು ಒದಗಿಸಲಿದೆ ಎಂದು ಸಚಿವರು ವಿವರಿಸಿದರು. ಕಸದಿಂದ ರಸ ಎಂಬಂತೆ ಈ ರಸ್ತೆಗಳಿಗೆ ಸುಮಾರು ೧೫ ವರ್ಷಗಳವರೆಗೆ ಯಾವುದೇ ರೀತಿಯ ನಿರ್ವಹಣೆ ಅಥವಾ ದುರಸ್ತಿಯ ಅಗತ್ಯವಿರುವುದಿಲ್ಲ ಎಂದು ಅವರು ಹೇಳಿದರು.

**<>><><*><><<>**

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನವದೆಹಲಿಯಲ್ಲಿ ಇಂದು ಮಲೇಷ್ಯಾದ ಹೂಡಿಕೆ, ವ್ಯಾಪಾರ ಮತ್ತು ಕೈಗಾರಿಕಾ ಸಚಿವ ದತುಕ್ ಸಿರಿ ಜೋಹರಿ ಅಬ್ದುಲ್ ಘನಿ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು. ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಸಚಿವ ಪಿಯೂಶ್ ಗೋಯಲ್, ಸಭೆಯಲ್ಲಿ ಭಾರತ-ಮಲೇಷ್ಯಾ ಆರ್ಥಿಕ ಸಹಭಾಗಿತ್ವವನ್ನು ಎರಡೂ ದೇಶಗಳು ಪರಿಶೀಲಿಸಿದ್ದು, ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಹೆಚ್ಚಿಸುವುದು, ಮಾರುಕಟ್ಟೆ ಪ್ರವೇಶವನ್ನು ಸುಧಾರಿಸುವುದು ಹಾಗೂ ಪರಸ್ಪರ ಪೂರಕ ಸಾಮರ್ಥ್ಯ ಹೊಂದಿರುವ ಕ್ಷೇತ್ರಗಳಲ್ಲಿ ಪೂರೈಕೆ ಸರಪಳಿ ಸಂಪರ್ಕಗಳನ್ನು ಬಲಪಡಿಸುವ ಕುರಿತು ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

**<>><><*><><<>**

ಆರು ವರ್ಷಗಳಿಂದ ಸ್ಥಗಿತಗೊಂಡಿದ್ದ ಗಾಂಗ್‌ಝೌ ಮತ್ತು ನವದೆಹಲಿ ನಡುವಿನ ಪ್ರಯಾಣಿಕ ವಿಮಾನ ಸಂಚಾರ ಸೇವೆ ಇದೇ ೨೧ ರಿಂದ ಪುನರಾರಂಭಿಸುವುದಾಗಿ ಚೀನಾ ಸದರ್ನ್ ಏರ್‌ಲೈನ್ ತಿಳಿಸಿದೆ. ೨೦೨೦ ರಲ್ಲಿ ಕೋವಿಡ್ -೧೯ ಸಾಂಕ್ರಾಮಿಕದ ಬಳಿಕ ಭಾರತ-ಚೀನಾ ನಡುವೆ ವಾಯುಯಾನ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು. ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಬ್ರಿಕ್ಸ್ ಶೃಂಗಸಭೆಗಾಗಿ ಭಾರತಕ್ಕೆ ಭೇಟಿ ನೀಡಿ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸುತ್ತಿರುವ ಸಂದರ್ಭದಲ್ಲೇ ಈ ವಾಯುಯಾನ ಸೇವೆಯ ಪುನರಾರಂಭ ಸಾಧ್ಯವಾಗಿದೆ.

ಇದೇ ವರ್ಷದ ಮಾರ್ಚ್‌ನಲ್ಲಿ ಇಂಡಿಗೋ ಸಂಸ್ಥೆ, ಶಾಂಘೈ ಮತ್ತು ಕೊಲ್ಕತ್ತಾ ನಡುವೆ ವಿಮಾನ ಹಾರಾಟ ಆರಂಭಿಸಿತ್ತು.

**<>><><*><><<>**

ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘ್‌ವಾಲ್ ಅವರು ಇಂದು ನವದೆಹಲಿಯಲ್ಲಿ ನಡೆದ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ -ಐಸಿಎಐನ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡರು. ಕಾರ್ಯಕ್ರಮ ದೇಶದ ೧೩ ಕೇಂದ್ರಗಳಲ್ಲಿ ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಸಚಿವರು, ನೂತನವಾಗಿ ಮಾನ್ಯತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳಿಗೆ ಸದಸ್ಯತ್ವ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.

**<>><><*><><<>**

ಚೀನಾದ ಮೋಚಿಯಲ್ಲಿ ನಡೆಯುತ್ತಿರುವ ಮಹಿಳಾ ಜೂನಿಯರ್ ಏಷ್ಯಾಕಪ್-೨೦೨೬ ಹಾಕಿ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ ಸೌತ್ ಕೊರಿಯಾ ತಂಡವನ್ನು ೫-೧ ಅಂತರದಲ್ಲಿ ಮಣಿಸಿ, ಭಾರತ ಮಹಿಳಾ ತಂಡ ಫೈನಲ್ ಪ್ರವೇಶಿಸಿದೆ. ಇನ್ನು ಭಾರತ ತಂಡ ಫೈನಲ್‌ನಲ್ಲಿ ಚೀನಾ ತಂಡವನ್ನು ಎದುರಿಸಲಿದೆ. ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಪರ ಸುಪ್ರಿಯಾ ತ್ರಿವಳಿ ಗೋಲು ಗಳಿಸಿದರೆ, ಮಧು ಸಿದಾರ್ ಮತ್ತು ಸುಖವೀರ್ ಕೌರ್ ತಲಾ ಒಂದು ಗೋಲು ಗಳಿಸಿದರು.

**<>><>< ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**